ಅಂತ ಅವ್ವ ಹೇಳಿದಾಗ, ಅದು ಸಮ್ಮಿದಾನ ಅಲ್ಲ ಸಂವಿಧಾನ ಅಂತ ತಿದ್ದಿದ್ದ. ತಾಯಮ್ಮನ ಮಗ ಪಬ್ಲಿಕ್ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಫಸ್ಟು ಬಂದನಂತೆ! ನಮ್ಮ ಹುಡುಗರೂ ಇದಾವೆ ದಂಡಕ್ಕೆ ಅಂತ ಊರಿನ ಕೆಲವರು ಬಾಯಿಬಿಟ್ಟು ಹೇಳಿ ತಮ್ಮ ಮಕ್ಕಳ ದುರದೃಷ್ಟವನ್ನು ಹಳಿದುಕೊಂಡಿದ್ದರು. ತಾಯಮ್ಮನಿಗೆ ಹೊಟ್ಟೆಗಿದ್ರೆ, ಬಟ್ಟೆಗಿಲ್ಲ. ದೇವರು ಅವ್ಳಿಗೆ ಬುದ್ಧಿವಂತ ಮಗನ್ನ ಕೊಟ್ಟಿದ್ದಾನೆ. ಅವ್ನು ಅಷ್ಟು ಬುದ್ಧಿವಂತ ಆಗಿದ್ದೆಂಗೆ? ಅಪ್ಪ, ಅಮ್ಮ ಇಬ್ಬರೂ ಹೆಬ್ಬೆಟ್ಟುಗಳು! ಮಗ ತಾಲ್ಲೂಕಿಗೇ ಫಸ್ಟು ಬಂದವನೆ ಅಂದರೆ ನಂಬಕೇ ಆಗಲ್ಲ ಅಂತ ಪಂಚಾಯ್ತಿ ಪ್ರೆಸಿಡೆಂಟರು ಯಾರ ಬಳಿಯೊ ಹೇಳಿದರಂತೆ. ಆ ಮೇಲೆ ಅವನನ್ನು ಮನೆಗೆ ಕರೆಸಿಕೊಂಡು ಜಗುಲಿ ಮೇಲೆ ಕೂರಿಸಿ ಮಾತಾಡಿಸಿದ್ದರು.

‘ನೀನು ಪಿಯುಸಿ ಮುಗಿಸು, ನಮ್ ಪಂಚಾಯ್ತಿಯಲ್ಲೇ ನಿಂಗೊಂದು ಕೆಲಸ ಕೊಡ್ತೀನಿ. ಊರಲ್ಲೇ ಇದ್ದು ನಿಮ್ಮಪ್ಪ, ಅಮ್ಮನ್ನ ಚೆನ್ನಾಗಿ ನೋಡ್ಕಭೌದು...’ ಅಂತ ಹೇಳಿ ಐನೂರು ರೂಪಾಯಿ ಬಹುಮಾನ ಅಂತ ಕೊಟ್ಟು ಕಳಿಸಿದ್ದರು.

‘ತಾಲ್ಲೂಕಿಗೇ ಫಸ್ಟು ಬಂದೆ ಅಂತ ಪ್ರೆಸಿಡೆಂಟರು ಐನೂರು ರೂಪಾಯಿ ಬಹುಮಾನ ಕೊಟ್ಟರು’ ಅಂತ ಹೇಳಿಕೊಂಡು ಅದನ್ನು ಅವ್ವನಿಗೆ ಕೊಡುತ್ತ ‘ಪಿಯುಸಿ ಮುಗಿದ ಮೇಲೆ ನಂಗೆ ಅವರ ಪಂಚಾಯ್ತಿಯಲ್ಲೇ ಕೆಲ್ಸ ಕೊಡ್ತಾರಂತೆ...’ ಅಂದ.

‘ನೀನು ಪಂಚಾಯ್ತಿ ಚಾಕರಿ ಮಾಡೋದೇನೂ ಬೇಡ. ಕಾಲೇಜಿಗೆ ಹೋಗಿ ಓದಿ, ದೊಡ್ಡ ಕೆಲಸಕ್ಕೆ ಸೇರಬೇಕು. ಆ ಮನೆಹಾಳನಿಗೆ ನನ್ನ ಮಗ ಕಾಲೇಜು ಓದೋದು ಇಷ್ಟವಿಲ್ಲ. ಅವನು ಕೊಡೊ ಕೆಲಸಕ್ಕೆ ಸೇರೊ ವಿಷಯ ಮರೆತು ಚೆನ್ನಾಗಿ ಓದು’ ಅಂತ ಅವ್ವ ಖಡಕ್ಕಾಗಿ ಹೇಳಿದ್ದಳು.... ‘ಅವ್ವಾ, ನೀನು ಹಿಂಗೆ ನನ್ನ ಮುಂದೆ ಕೂತಿದ್ದು ಸಾಕು, ಹೋಗಿ ಮಲಗು. ನಾನು ಇನ್ನೂ ಸ್ವಲ್ಪ ಹೊತ್ತು ಓದಿ ಮಲಗ್ತೀನಿ...’ ಅಂತ ಅವನು ಹೇಳಿದರೂ ತಾಯಮ್ಮ ಕೂತ ಜಾಗ ಬಿಟ್ಟು ಕದಲುತ್ತಿರಲಿಲ್ಲ! ಎಷ್ಟೋ ದಿನ ಇಡೀ ಕೇರಿ ಮಲಗಿದರೂ ಅವನು ಓದುತ್ತಲೇ ಕೂತಿರುತ್ತಿದ್ದ. ಅವನ ಎದುರು ಅವ್ವ. ನಾನು ತೂಕಡಿಸ್ತೀನಿ ಅಂತ ನೀನು ಕಾವಲು ಕೂರೊದು ಬೇಡ ಅಂದರೂ ಅವ್ವ ಕೇಳುತ್ತಿರಲಿಲ್ಲ. ಗೋಡೆಗೊರಗಿ ಕೂತೇ ಇರುತ್ತಿದ್ದಳು. ಫೋಟೊದಲ್ಲಿದ್ದ ಅಜ್ಜನೂ ಅಷ್ಟೇ. ಇಬ್ಬರೂ ನನ್ನ ಕಾವಲಿಗೆ ಕೂತಿದ್ದಾರೇನೊ ಅನ್ನಿಸುವ ಹಾಗೆ.

